ಹೊಸ ತಾಲ್ಲೂಕುಗಳ ರಚನೆ

3138 (3311); ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹುನಗುಂದ)

ಅ) ಹೊಸ ತಾಲ್ಲೂಕುಗಳ ರಚನೆ ಮತ್ತು ಘೋಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಬಾಗಲಕೋಟೆ ಜಿಲ್ಲೆಯಲ್ಲಿ ಹೊಸದಾಗಿ ರಚನೆಯಾಗುವ ತಾಲ್ಲೂಕುಗಳೆಷ್ಟು; ಅವು ಯಾವುವು;

ಇ) ಹೊಸ ತಾಲ್ಲೂಕು ರಚನೆಗೆ ಸಂಪನ್ಮೂಲ ಒದಗಿಸಲಾಗುವುದೇ (ಪೂರ್ಣ ಮಾಹಿತಿ ಒದಗಿಸುವುದು)?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಯಿಂದ ಇ) ವರೆಗೆ 2013–14ನೇ ಸಾಲಿನಲ್ಲಿ ಘೋಷಿಸಲಾದ ಆಯವ್ಯಯದಲ್ಲಿ ಹೊಸದಾಗಿ 43 ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಿಸಲಾಗಿದ್ದು, ಈ ಪೈಕಿ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ, ರಬಕವಿ–ಬನಹಟ್ಟಿ ಮತ್ತು ಇಳಕಲ್ ಇವುಗಳು ಸೇರಿರುತ್ತವೆ. ಈ ತಾಲ್ಲೂಕುಗಳನ್ನು ರಚಿಸಲು ಸರ್ಕಾರವು ಬದ್ಧವಾಗಿರುತ್ತದೆ.

ಅರಣ್ಯ ಅಭಿವೃದ್ಧಿ

3139 (3312); ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹುನಗುಂದ)

ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ಅರಣ್ಯ ಭೂಮಿ ಎಷ್ಟು;

ಆ) ಈ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಯಾವ ಯಾವ ಪ್ರಾಣಿ ಮತ್ತು ಪಕ್ಷಿಗಳು ಸಂರಕ್ಷಿತವಾಗಿವೆ;(ವಿವರ ನೀಡುವುದು)

ಇ) ಸದರಿ ಅರಣ್ಯ ಪ್ರದೇಶದಲ್ಲಿ ಸರ್ಕಾರ ಮಣ್ಣು ಹಾಗೂ ಕಲ್ಲು ಗಣಿಗಾರಿಕೆಗೆ ಗುತ್ತಿಗೆ ನೀಡಿದೆಯೇ (ಸಂಪೂರ್ಣ ಮಾಹಿತಿ ಒದಗಿಸುವುದು)

ಈ) ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶಗಳ ಒತ್ತುವರಿಯಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬಾಗಲಕೋಟೆ ಜಿಲ್ಲೆಯಲ್ಲಿ 79,069 ಹೆ. ಅರಣ್ಯ ಪ್ರದೇಶ ಇರುತ್ತದೆ.

ಆ) ಬಾಗಲಕೋಟೆ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಚಿಂಕಾರಾ, ತೋಳ, ನರಿ, ಮೊಲ ಮತ್ತು ಕಾಡು ಹಂದಿ ಹಾಗೂ ನವಿಲು, ಗಿಳಿ, ಪಾರಿವಾಳ, ಗುಬ್ಬಿ ಇತ್ಯಾದಿ ಜಾತಿಯ ಪ್ರಾಣಿ ಮತ್ತು ಪಕ್ಷಿಗಳು ಸಂರಕ್ಷಿತವಾಗಿದೆ.

ಇ) ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶದಲ್ಲಿ ಮಣ್ಣು ಮತ್ತು ಕಲ್ಲು ಗಣಿಗಾರಿಕೆಗೆ ಯಾವುದೇ ಗುತ್ತಿಗೆಗಳನ್ನು ನೀಡಲಾಗಿರುವುದಿಲ್ಲ.

ಈ) ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶದಲ್ಲಿ 1514 ಕುಟುಂಬಗಳು 563.110 ಹೆ. ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 202/1995 ರಲ್ಲಿ ನೀಡಿರುವ ಆದೇಶದ ಪ್ರಕಾರ ದಿನಾಂಕ 27-4-1978 ರ ಪೂರ್ವದಲ್ಲಿನ ಅತಿಕ್ರಮಣಗಳ ಪೈಕಿ ಸಕ್ರಮಕ್ಕೆ ಅನರ್ಹವಾಗಿರುವ ಒತ್ತುವರಿಗಳನ್ನು ಹಾಗೂ ದಿನಾಂಕ 27-4-1978 ರ ನಂತರದ ಎಲ್ಲ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್-64/ಎ ಪ್ರಕಾರ ಅವಶ್ಯಕ ಕ್ರಮ ಜರುಗಿಸಲಾಗುತ್ತಿದೆ.